## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 614 |
| ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ್ ಅರಳಿ |
| ಉತ್ತರಿಸುವ ದಿನಾಂಕ: | 17.12.2021 |
| ಉತ್ತರಿಸುವ ಸಚಿವರು | ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2021-22 ನೇ ಸಾಲಿನಲ್ಲಿ ಬೀದರ್ ಜಿಲ್ಲೆಯ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯಲ್ಲಿ ನಿಗಧಿಪಡಿಸಿರುವ ಅನುದಾನ ಎಷ್ಟು ಹಾಗೂ ಯಾವ ಯಾವ ಯೋಜನೆಗಳನ್ನು ಒಳಗೊಂಡಿದೆ; | 2021-22 ನೇ ಸಾಲಿನಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೀದರ್ ಜಿಲ್ಲೆಗೆ ರೂ.1701.65 ಲಕ್ಷಗಳ ಅನುದಾನವನ್ನು ನಿಗಧಿಪಡಿಸಲಾಗಿದೆ. ಯೋಜನೆಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ) | ಈ ಎಲ್ಲಾ ಯೋಜನೆಗಳನ್ನು ಆಯ್ಕೆ ಸಮಿತಿ ಸಭೆಯಲ್ಲಿ ತೀರ್ಮಾನಿಸಿ ಮಾಡಲಾಗಿದೆಯೇ; (ಮಾಡಿದ್ದಲ್ಲಿ, ಸಭೆಯ ನಡವಳಿಕೆಗಳನ್ನು ನೀಡುವುದು ಹಾಗೂ ಆಯ್ಕೆ ಸಮಿತಿಯ ವಿವರ ನೀಡುವುದು) | • ಪರಿಶಿಷ್ಟ ಪಂಗಡ ವಿದ್ಯಾರ್ಥಿ ನಿಲಯಗಳ ನಿರ್ವಹಣೆ ಲೆಕ್ಕಶೀರ್ಷಿಕೆ 2225-00-102-0-33 ರ ಕಾರ್ಯಕ್ರಮವನ್ನು 2021-22ನೇ ಸಾಲಿನಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳ ವಿದ್ಯಾರ್ಥಿನಿಲಯ ಪ್ರವೇಶಾತಿಯನ್ನು ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿದ್ದು ಈ ಸಂಬಂಧ ಆಯ್ಕೆ ಸಮಿತಿಯ ವಿವರ ಮತ್ತು ನಡವಳಿಯನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.<br>• ಬೀದರ್ ಜಿಲ್ಲೆಯ ಉಳಿದ ಔರಾದ(ಬಿ), ಬೀದರ್ ಹಾಗೂ ಹುಮನಾಬಾದ ತಾಲ್ಲೂಕಿನ ಮಾನ್ಯ ಶಾಸಕರು, ಆಯ್ಕೆ ಸಮಿತಿಯ ಅಧ್ಯಕ್ಷರಾಗಿರುವುದರಿಂದ ಮಾನ್ಯರ ಅನುಮೋದನೆಗಾಗಿ ಕಡತ ಮಂಡಿಸಲಾಗಿದೆ.<br>• ವಿದ್ಯಾರ್ಥಿ ನಿಲಯಗಳು, ವಿದ್ಯಾರ್ಥಿ ವೇತನ ಮತ್ತು ಧನ ಸಹಾಯ ಲೆಕ್ಕ ಶೀರ್ಷಿಕೆ 2225-00-102-0-38 ರಡಿ ಕಾನೂನ ಪದವೀಧರರಿಗೆ ಆಡಳಿತ ಮತ್ತು ನ್ಯಾಯಾಂಗ ತರಬೇತಿಗೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಸಮಿತಿಯ ಅಧ್ಯಕ್ಷರು ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಬೀದರ ಇವರಿಂದ ಆಯ್ಕೆ ಮಾಡಲಾಗುತ್ತದೆ. 2021-22ನೇ ಸಾಲಿನಲ್ಲಿ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದ್ದು ಇದುವರೆಗೂ ಯಾವುದೇ ಅರ್ಜಿ ಸ್ವೀಕೃತಗೊಂಡಿರುವುದಿಲ್ಲ.<br>• ಪರಿಶಿಷ್ಟ ಪಂಗಡ ಕಾಲೋನಿಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ಲೆಕ್ಕಶೀರ್ಷಿಕೆ 2225-00-102-0-69 ಮತ್ತು ಪರಿಶಿಷ್ಟ ಪಂಗಡ ಕುಟುಂಬಗಳಿಗೆ ಸಹಾಯಧನ ಲೆಕ್ಕಶೀರ್ಷಿಕೆ 2225-00-102-0-70ರ ಕಾರ್ಯಕ್ರಮಗಳು ತಾಲ್ಲೂಕು ಪಂಚಾಯಿತಿ ಕ್ರಿಯಾ ಯೋಜನೆಯ ಅನುಮತಿ ಪಡೆದು ಅನುಷ್ಠಾನಗೊಳಿಸಲಾಗುತ್ತಿದೆ.<br>• ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಲೆಕ್ಕಶೀರ್ಷಿಕೆ 2225-00-102-0-31 - ಯಾವುದೇ ಆಯ್ಕೆ ಸಮಿತಿ ಇರುವುದಿಲ್ಲ. |

- ಮೆಟ್ರಿಕ್ ನಂತರ ಸರ್ಕಾರಿ ವಿದ್ಯಾರ್ಥಿ ನಿಲಯ ಕಟ್ಟಡಗಳ ನಿರ್ವಹಣೆ ಲೆಕ್ಕಶೀರ್ಷಿಕೆ 2225–00–102–0–43 – ಯಾವುದೇ ಆಯ್ಕೆ ಸಮಿತಿ ಇರುವುದಿಲ್ಲ.
- ಕಾರ್ಯಕಾರಿ ಸಿಬ್ಬಂದಿ ಜಿಲ್ಲಾ ಗಿರಿಜನ ಕಲ್ಯಾಣ ಕಛೇರಿ ಲೆಕ್ಕಶೀರ್ಷಿಕೆ 2225–00–102–0–46 – ಯಾವುದೇ ಆಯ್ಕೆ ಸಮಿತಿ ಇರುವುದಿಲ್ಲ.
- ಖಾಸಗಿ ವಿದ್ಯಾರ್ಥಿ ನಿಲಯಗಳಿಗೆ ಸಹಾಯಾನುಧಾನ ಲೆಕ್ಕಶೀರ್ಷಿಕೆ 2225–00–102–0–48 – ಯಾವುದೇ ಆಯ್ಕೆ ಸಮಿತಿ ಇರುವುದಿಲ್ಲ.
- ಪರಿಶಿಷ್ಟ ವರ್ಗದವರಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಗಳು ಲೆಕ್ಕಶೀರ್ಷಿಕೆ 2225–00–102–0–07 – ಯಾವುದೇ ಆಯ್ಕೆ ಸಮಿತಿ ಇರುವುದಿಲ್ಲ.
- ಕ್ರೇಂದ್ರ ಪುರಸ್ಕೃತ ಯೋಜನೆ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮೆಟ್ರಿಕ ಪೂರ್ವ ವಿದ್ಯಾರ್ಥಿ ವೇತನ (9&10ನೇ ತರಗತಿ) ಲೆಕ್ಕಶೀರ್ಷಿಕೆ 2225–00–102–0–09 – ಯಾವುದೇ ಆಯ್ಕೆ ಸಮಿತಿ ಇರುವುದಿಲ್ಲ.
- ಪ.ಪಂಗಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಲೆಕ್ಕಶೀರ್ಷಿಕೆ 2225–00–102–0–68 – ಯಾವುದೇ ಆಯ್ಕೆ ಸಮಿತಿ ಇರುವುದಿಲ್ಲ.

ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿಗಳಿಗೆ ಹೆಚ್ಚಿನ ಭೋಜನ ಮತ್ತು ವಸತಿ ವೆಚ್ಚಗಳ ಪಾವತಿ 2225–00–102–0–71 – ಯಾವುದೇ ಆಯ್ಕೆ ಸಮಿತಿ ಇರುವುದಿಲ್ಲ. ಈ ಜಿಲ್ಲೆಯಲ್ಲಿ ಮೂಲನಿವಾಸಿಗಳು ನೆಲೆಸಿರುವುದಿಲ್ಲ.

ಇ) ಇಲಾಖೆಯ ಮೂಲ ನಿವಾಸಿಗಳ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು; ಈ ಅಭಿವೃದ್ಧಿ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಲಾದ ಅನುದಾನ ಎಷ್ಟು? (ಬಿಡುಗಡೆ ಮಾಡಿದ್ದಲ್ಲಿ, ವಿವರವಾದ ಮಾಹಿತಿ ನೀಡುವುದು)

2021–22ನೇ ಸಾಲಿನಲ್ಲಿ ನೈಜ ದುರ್ಬಲ ಬುಡಕಟ್ಟು ಗುಂಪುಗಳಾದ ಜೇನುಕುರುಬ ಮತ್ತು ಕೊರಗ ಸಮುದಾಯದವರ ಸಮಗ್ರ ಅಭಿವೃದ್ಧಿಗಾಗಿ ರೂ.1736.00 ಲಕ್ಷಗಳನ್ನು ನಿಗಧಿಪಡಿಸಲಾಗಿದೆ. ಪರಿಶಿಷ್ಟ ಪಂಗಡದ ಮೂಲನಿವಾಸಿ ಸಮುದಾಯಗಳಾದ ಜೇನುಕುರುಬ ಮತ್ತು ಕೊರಗ ಸಮುದಾಯದವರ ಸಾಮಾಜಿಕ–ಆರ್ಥಿಕ ಅಭಿವೃದ್ಧಿಗಾಗಿ ಮೂಲನಿವಾಸಿಗಳ ಆರೋಗ್ಯ(ವೈದ್ಯಕೀಯ ಮರುಪಾವತಿ ಹೊರತುಪಡಿಸಿ), ಶಿಕ್ಷಣ, ಮೂಲಭೂತ ಸೌಕರ್ಯ, ನೀರಿನ ಭದ್ರತೆ ಮತ್ತು ನೈರ್ಮಲ್ಯಗಳನ್ನು ಒಳಗೊಂಡಂತೆ ಈಗಾಗಲೇ ಹೊಂದಿರುವ ಸೌಲಭ್ಯಗಳು gap-filling intervention ಆಧಾರದಲ್ಲಿ ಆಧ್ಯತಾ ಕ್ಷೇತ್ರಗಳಿಗೆ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ ಅನುಷ್ಠಾನಗೊಳಿಸಲು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ಈ ಕೆಳಕಂಡಂತೆ ನಿಗಧಿಪಡಿಸಿ ಬಿಡುಗಡೆ ಮಾಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರ ಸಂ | ಸಮುದಾಯ | ಜಿಲ್ಲೆಯ ಹೆಸರು | ಜನ ಸಂಖ್ಯೆ | ನಿಗಧಿಪಡಿಸಿದ ಅನುದಾನ | ಈಗಾಗಲೇ ಬಿಡುಗಡೆಯಾದ ಅನುದಾನ |
|---|---|---|---|---|---|
| 1. | ಜೇನು ಕುರುಬ | ಮೈಸೂರು | 21,995 | 785.37 | 392.68 |
| | | ಚಾಮರಾಜನಗರ | 832 | 29.69 | 14.85 |
| 3. | | ಕೊಡಗು | 12,191 | 435.38 | 217.69 |
| 4. | ಕೊರಗ | ದಕ್ಷಿಣಕನ್ನಡ | 4,631 | 165.44 | 82.72 |
| 5. | | ಉಡುಪಿ | 8,966 | 320.12 | 160.06 |
| | | **ಒಟ್ಟು** | **48,615** | **1736.00** | **868.00** |

| | | |
|---|---|---|
| | | ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯಕ್ಕೆ Development for PVTGs ಕಾರ್ಯಕ್ರಮದಡಿ ರೂ.430.00 ಲಕ್ಷಗಳ ಕ್ರಿಯಾಯೋಜನೆಯನ್ನು ಸಲ್ಲಿಸಲಾಗಿದೆ. |

**ಸಕಇ 455 ಎಸ್‌ಟಿಪಿ 2021**

(ಬಿ. ಶ್ರೀರಾಮುಲು),
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

## ಅನುಬಂಧ-1

| ಕ್ರಸಂ | ಯೋಜನೆಗಳ ಹೆಸರು ಮತ್ತು ಲೆಕ್ಕಶೀರ್ಷಿಕೆ | 2021-22ನೇ ಸಾಲಿಗೆ ನಿಗದಿಪಡಿಸಿದ ಅನುದಾನ |
|---|---|---|
| 1 | 2 | 3 |
| 1 | ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ 2225-00-102-0-31 | 146.120 |
| 2 | ಪರಿಶಿಷ್ಟ ಪಂಗಡ ವಿದ್ಯಾರ್ಥಿ ನಿಲಯಗಳ ನಿರ್ವಹಣೆ 2225-00-102-0-33 | 132.970 |
| 3 | ವಿದ್ಯಾರ್ಥಿ ನಿಲಯಗಳು, ವಿದ್ಯಾರ್ಥಿ ವೇತನ ಮತ್ತು ಧನ ಸಹಾಯ 2225-00-102-0-38 | 333.790 |
| 4 | ಮೆಟ್ರಿಕ್ ನಂತರ ಸರ್ಕಾರಿ ವಿದ್ಯಾರ್ಥಿ ನಿಲಯ ಕಟ್ಟಡಗಳ ನಿರ್ವಹಣೆ 2225-00-102-0-43 | 171.340 |
| 5 | ಕಾರ್ಯಕಾರಿ ಸಿಬ್ಬಂದಿ ಜಿಲ್ಲಾ ಗಿರಿಜನ ಕಲ್ಯಾಣ ಕಛೇರಿ 2225-00-102-0-46 | 76.200 |
| 6 | ಖಾಸಗಿ ವಿದ್ಯಾರ್ಥಿ ನಿಲಯಗಳಿಗೆ ಸಹಾಯಾನುಧಾನ 2225-00-102-0-48 | 3.000 |
| 7 | ಪರಿಶಿಷ್ಟ ವರ್ಗದವರಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಗಳು 2225-00-102-0-07 | 402.790 |
| 8 | ಕ್ರೇಂದ್ರ ಪುರಸ್ಕೃತ ಯೋಜನೆ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮೆಟ್ರಿಕ ಪೂರ್ವ ವಿದ್ಯಾರ್ಥಿ ವೇತನ (9&10ನೇ ತರಗತಿ) 2225-00-102-0-09 | 103.560 |
| 9 | ಪ.ಪಂಗಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ 2225-00-102-0-68 | 254.280 |
| 10 | ಪ.ಪಂಗಡ ಕಾಲೋನಿಗಳಿಗೆ ಮೂಲಭೂತ ಸೌಕರ್ಯ ಒದಗಿಸುವುದು 2225-00-102-0-69 | 25.000 |
| 11 | ಪ.ಪಂಗಡ ಕುಟುಂಬಗಳಿಗೆ ಸಹಾಯಧನ 2225-00-102-0-70 | 15.000 |
| 12 | ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿಗಳಿಗೆ ಹೆಚ್ಚಿನ ಭೋಜನ ಮತ್ತು ವಸತಿ ವೆಚ್ಚಗಳ ಪಾವತಿ 2225-00-102-0-71 | 37.600 |
| | **ಒಟ್ಟು:-** | **1701.650** |